‘ಒಂದೊಂದು ವ್ಯಕ್ತಿ ಮಾತ್ರದಲ್ಲಿ ಇಡೀ ವಿಶ್ವವೇ ಹುದುಗಿಕೊಂಡಿರುವುದು... ವ್ಯಕ್ತಿತ್ವವೇ ನನ್ನ ಗುರಿ. ವ್ಯಕ್ತಿಗಳನ್ನು ತರಬೇತು ಮಾಡುವುದಕ್ಕಿಂತ ಹೆಚ್ಚಿನ ಮಹತ್ವಾಕಾಂಕ್ಷೆ ನನಗಿಲ್ಲ’

ಸ್ವಾಮಿ ವಿವೇಕಾನಂದ

ಬೇರೊಬ್ಬ ದೇವನನ್ನು ಹುಡುಕುವುದೆಲ್ಲಿ? ಯಾರು ಜೀವರಿಗೆ ಸೇವೆ ಸಲ್ಲಿಸುತ್ತಾನೋ ಅವನು ದೇವರಿಗೇ ಸೇವೆ ಸಲ್ಲಿಸಿದಂತೆ.''' (ಸ್ವಾಮಿ *ವಿವೇಕಾನಂದರ ಕೃತಿಶ್ರೇಣಿ ೮.೨೪೨*) ವಿಶ್ವದ ಉದಾತ್ತತಮ ವಿಚಾರ ಸ್ವಾಮೀಜಿಯವರ ಈ ಮಾತುಗಳಲ್ಲಿ ಮೂರ್ತಿವಂತವಾಗಿ ನಿಂತಿವೆ. ಸರ್ವಭೂತಾಂತರ್ಗತನಾದ, ವಿರಾಟ್ ಸ್ವರೂಪನಾದ, ಚೈತನ್ಯಮಯನಾದ ಹೊಸಯುಗದ ದೇವನ ಉಪಾಸನೆ ಈ ಮಹಾಯುಗಚಕ್ರ ಪರಿವರ್ತನೆಗೆ ಸಹಾಯಾರ್ಥವಾಗುತ್ತದೆಂದರು. ಈ ಉಪಾಸನೆಯಿಂದ ಪ್ರತಿಯೊಬ್ಬ ಮಾನವನ ಹೃದಯದಲ್ಲಿ ಮಲಗಿರುವ ಬ್ರಹ್ಮಶಾರ್ದೂಲ ಎದ್ದೇಳುವುದರಲ್ಲಿ ಸಂದೇಹವಿಲ್ಲ. □

---

## ಸ್ವಾಮಿ ವಿವೇಕಾನಂದರ ‘ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣ’ ಎಂಬ ಉಪನ್ಯಾಸದಿಂದ:

ಈ ನವಯುಗಧರ್ಮವು ಸಮಗ್ರ ಜಗತ್ತಿನ, ಅದರಲ್ಲಿಯೂ ಭಾರತವರ್ಷದ ಕಲ್ಯಾಣ ಮಾರ್ಗವಾಗಿರುವುದು... ಈ ನವ ಯುಗಧರ್ಮ ಪ್ರವರ್ತಕರಾದ ಭಗವಾನ್ ಶ್ರೀರಾಮಕೃಷ್ಣರು ಹಿಂದೆ ಅವತರಿಸಿದ ಯುಗಧರ್ಮಪ್ರವರ್ತಕ ಸಮೂಹದ ಪುನಃಸಂಸ್ಕೃತ ಮಹಾ ಪ್ರಕಾಶವಾಗಿರುತ್ತಾರೆ. ಹೇ ಮಾನವ, ಇದನ್ನು ನಂಬು; ನಂಬಿ ಬಾಳು!

ಹೇ ಮಾನವ, ಮೃತವ್ಯಕ್ತಿಯು ಪುನರಾಗತನಾಗನು; ಕಳೆದ ಇರುಳು ಮರಳಲರಿಯದು ; ಬೀಸಿದ ಗಾಳಿಯು ಮೊದಲಿನಂತೆ ಮರಳಿ ಬೀಸದು; ಜೀವನು ಕೂಡ ಒಂದೇ ದೇಹವನ್ನು ಎರಡು ಸಾರಿ ಹೊಂದುವುದಿಲ್ಲ. ಆದುದರಿಂದ ಓ ಮಾನವ, ಅತೀತದ ಪೂಜೆಯಿಂದ ಪ್ರತ್ಯಕ್ಷದ ಪೂಜೆಗೆ, ನಿನಗಿದೋ ಆಹ್ವಾನ! ಹೋದ ದುಃಖದಿಂದ ಬರುವ ಸುಖಕ್ಕೆ ನಿನಗಿದೋ ಆಹ್ವಾನ! ಗತಾನುಶೋಚನೆಯಿಂದ ಆಧುನಿಕ ನವ ಪ್ರಯತ್ನಕ್ಕೆ ನಿನಗಿದೋ ಆಹ್ವಾನ!.... ಓ ಬುದ್ಧಿಮಾನ್ ಮಾನವ ಇದನ್ನು ತಿಳಿ; ಸಿದ್ಧನಾಗು ಪ್ರಬುದ್ಧನಾಗು!

---

## ಕಲ್ಪತರು

ದಿವಿಯನಿಳಿದು ಭುವಿಯೊಳಗೆ ಬೆಳೆದು ವಿ-
ಸ್ತರಿಸಿ ನಿಂದವನೆ ನಮೋ ನಮೋ!
ಕಲ್ಪ ಕಲ್ಪಗಳ ಜಗದ ಹಂಬಲಕೆ
ಕಲ್ಪತರುವಾದ ನಿನಗೆ ನಮೋ!

ಆಳದಾಳದಲಿ ಬೇರನೂರಿ ಮುಂ-
ಬರಿಯಿತು ನಿನ್ನಯ ಸಾಧನೆಯು; ಪಾ-
ತಾಳದಿಂದಲೂ ರಸವ ಹೀರುತಲಿ
ಪುಷ್ಟಿಯ ಪಡೆಯಿತು ಚೇತನವು!

ನೀನು ಕಂಡ ಹೊಂಬೆಳಕು ಪಸರಿಸಿತು
ಕೊಂಬೆಕೊಂಬೆಯೊಲು ದಿಸೆದಿಸೆಗೆ;
ನಿನ್ನ ವಚನಸುಧೆ ನೆರಳನು ನೀಡಿತು
ಹಸಿರ ಹರಡಿ ಸಚರಾಚರಕೆ!

ಎದೆಎದೆಗಳಲೂ ಬೇರ್ಗಳನಿಳಿಸುತ
ಸಾಗಿದೆ ನಿನ್ನಯ ಹಿರಿಕರುಣೆ;
ಬಳಲಿ ಬೆಂದವರ ಬಳಿಗೆ ಸೆಳೆದು ಹಿರಿ-
ಯಾಸೆರೆಯೀವನು ನೀನೇನೆ!

—ಹೆಚ್.ಎನ್. ಮುರಳೀಧರ